# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ. 286/2018

ಸಿಡಬ್ಲ್ಯೂ-7 ಪಿಡಬ್ಲ್ಯೂ-8

| | | |
|---|---|---|
| ಹೆಸರು | : | ಶ್ರೀ ಶೇಖ ಮುಕ್ತಾರ ಅಹ್ಮದ |
| ತಂದೆಯ ಹೆಸರು | : | ಕಮಾಲಸಾಬ |
| ವಯಸ್ಸು | : | 57 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ ಸ್ಥಳ | : | ಮಿಸ್ಕಿನಪುರ, ಸೇಡಂ |

ದಿನಾಂಕ 13.03.2023

ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರಕಾರಿ ಸಹಾಯಕ ಅಭಿಯೋಜಕರವರಿಂದ

ಮೃತ ಖಾಲೀದ ಸೈಪುಲ್ಲಾ ನನ್ನ ಮಗ ಇರುತ್ತಾರೆ. ಅವರು ರಸ್ತೆ ಅಪಘಾತದಲ್ಲಿ ತೀರಿಕೊಂಡಿರುತ್ತಾರೆ. ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ ಎಂದು ಗೊತ್ತಿಲ್ಲ. ನನಗೆ ನನ್ನ ತಮ್ಮ ಆಸ್ವಾಕ ಇವರು ಪೋನ ಮಾಡಿ ಅಪಘಾತದ ವಿಷಯ ತಿಳಿಸಿದ್ದು ನನ್ನ ಮಗ ರಾತ್ರಿ 11.30 ಗಂಟೆಗೆ ಕಲಬುರಗಿಯ ಬಸವೇಶ್ವರ ಆಸ್ಪತ್ರೆಯಲ್ಲಿ ತೀರಿಕೊಂಡಿರುತ್ತಾನೆ. ನನ್ನ ಮಗನಿಗೆ ಮೂಗಿಗೆ, ಹಣೆಗೆ, ಮುಖಕ್ಕೆ, ಗದ್ದಕ್ಕೆ ಪೆಟ್ಟಾಗಿತ್ತು. ನನ್ನ ಮಗ ಯಾವ ವಾಹನದ ಮೇಲೆ ಪ್ರಯಾಣಿಸುತ್ತಿದ್ದ ಎಂದು ಗೊತ್ತಿಲ್ಲ. ವಾಹನದ ನಂಬರ ಹೇಳಲು ಬರುವುದಿಲ್ಲ. ಅಪಘಾತ ರಂಜೋಳ ಕ್ರಾಸ ಹತ್ತಿರ ಆಗಿರುವುದಾಗಿ ಗೊತ್ತಾಗಿರುತ್ತದೆ. ಆರೋಪಿಯ ಪರಿಚಯ ಇಲ್ಲ. ಆರೋಪಿತನನ್ನು ಈ ಹಿಂದೆ ನೋಡಿಲ್ಲ. ಘಟನೆಯ ಕುರಿತು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ.

(**ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.**)

## ಪಾಟೀ ಸವಾಲುಃ ಸರಕಾರಿ ಸಹಾಯಕ ಅಭಿಯೋಜಕರವರಿಂದ

ಆರೋಪಿ ಮೊಟಾರ ಸೈಕಲ ನಂ.KA-32 EK 307 ವಾಹನವನ್ನು ನಡೆಸುತ್ತಿದ್ದ ನನ್ನ ಮಗ ಮಹ್ಮದ ಪಾಯಜ ಆತನ ಮೊಟಾರ ಸೈಕಲ ಮೇಲೆ ಕುಳಿತುಕೊಂಡಿದ್ದು, ಆಗ ಆರೋಪಿ ತಾನು ನಡೆಸುತ್ತಿದ್ದ ಮೊಟಾರ ಸೈಕಲನ್ನು ಅತೀ ವೇಗ ಹಾಗೂ ನಿಷ್ಕಾಳಜೀತನದಿಂದ ಚಲಾಯಿಸಿ ರಾತ್ರಿ 07.30 ಗಂಟೆಯ ಸುಮಾರಿಗೆ ರಂಜೋಳ ಕಡೆಯಿಂದ ವಾಹನ ಚಲಾಯಿಸಿಕೊಂಡು ಬಂದು ಒಮ್ಮೆಲೆ ರೋಡಿನ ತಗ್ಗಿನಲ್ಲಿ ಮುನಿಮ ಇವರ ಹೊಲದ ಹತ್ತಿರ ಅಪಘಾತಪಡಿಸಿರುತ್ತಾನೆ ಎಂದರೆ

ಸರಿಯಲ್ಲ. ಈ ಕುರಿತು ನನಗೆ ನನ್ನ ತಮ್ಮನಾದ ಆಸ್ವಾಕ ಇತ ಪೋನ ಮಾಡಿ ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. ಅಪಘಾತ ಆರೋಪಿಯ ದುಡುಕುತನದ ವಾಹನ ಚಾಲನೆಯಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮಗನ ಸಾವಿಗೆ ಆರೋಪಿಯ ವಾಹನ ಚಾಲನೆಯೇ ಕಾರಣ ಎಂದರೆ ಸರಿಯಲ್ಲ. ಈ ಕುರಿತು ನಾನು ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ–9 ಎಂದು ಗುರುತಿಸಲಾಯಿತು. ಆರೋಪಿತನೊಂದಿಗೆ ರಾಜೀ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಆರ್. ಎಮ್. ಆರೋಪಿ ಪರ ವಕೀಲರಿಂದ**

ಏನು ಇರುವುದಿಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ.ಸರಿ ಇದೆ.

ಸಹಿ/-

ಪ್ರ. ದ. ನ್ಯಾ ದಂ. ಸೇಡಂ.

*SYH*

# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ. ಸಿ. ನಂ. 286/2018

ಸಿಡಬ್ಲ್ಯೂ-11 ಪಿಡಬ್ಲ್ಯೂ-9

| | | |
|---|---|---|
| ಹೆಸರು | : | ಶ್ರೀ ಸೋಹೇಲ |
| ತಂದೆಯ ಹೆಸರು | : | ಮಹ್ಮದ ರಫೀಕ |
| ವಯಸ್ಸು | : | 24 ವರ್ಷ |
| ಉದ್ಯೋಗ | : | ವಿದ್ಯಾರ್ಥಿ |
| ವಾಸ ಸ್ಥಳ | : | ಮಿಸ್ಕಿನಪುರ, ಸೇಡಂ |

ದಿನಾಂಕ 13.03.2023

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಸಹಾಯಕ ಅಭಿಯೋಜಕರವರಿಂದ**

ದಿನಾಂಕ 21.03.2018 ರಂದು ಸಾಯಂಕಾಲ ನಾನು ಮತ್ತು ನನ್ನ ಗೆಳೆಯ ಖಾಲೀದ ಸೈಪುಲ್ಲಾ, ಸೈಪುಲ್ಲಾ ಮುನ್ನಾವರ ಪಾಷಾ, ನಯನ, ಪವನ, ಮಹ್ಮದ ಎಲ್ಲರೂ ಕೂಡಿಕೊಂಡು ಮೂರು ಮೊಟಾರ ಸೈಕಲ ಮೇಲೆ ಸೇಡಂದಿಂದ ರಂಜೋಳ ಗ್ರಾಮಕ್ಕೆ ಹೋಗಿ ಸೇಡಂಕ್ಕೆ ಮರಳಿ ಬರುತ್ತಿರುವಾಗ ಬಹಳ ಕತ್ತಲೆಯಾಗಿದ್ದು ಆರೋಪಿ ತನ್ನ ಹಿಂದೆ ಖಾಲೀದ ಸೈಪುಲ್ಲಾ ಇವರನ್ನು ಕೂಡ್ರಿಕೊಂಡಿದ್ದು ವಾಹನದ ಸ್ಲಿಪ ಆಗಿ ಬಿದ್ದಿರುತ್ತದೆ. ಆರೋಪಿಗೆ ಕಾಲಿಗೆ ಮತ್ತು ತಲೆಗೆ ಪೆಟ್ಟಾಗಿತ್ತು. ಖಾಲೀದ ಸೈಪುಲ್ಲಾ ಇವರಿಗೆ ತಲೆಗೆ, ಕೈಗೆ ಪೆಟ್ಟಾಗಿತ್ತು. ನಾನು ಅಪಘಾತವನ್ನು ಕಣ್ಣಾರೆ ಕಂಡಿಲ್ಲ, ಏಕೆಂದರೆ ನಾನು ಅಪಘಾತ ಸ್ಥಳದಿಂದ 200 ಮೀ. ದೂರ ಇದ್ದೆ. ನಂತರದಲ್ಲಿ ನಾನು ಸ್ಥಳಕ್ಕೆ ಹೋಗಿ ಗಾಯಗಳುಗಳನ್ನು ಆಸ್ಪತ್ರೆಗೆ ಸೇರಿಕೆ ಮಾಡಿರುತ್ತೇವೆ. ಖಾಲೀದ ಸೈಪುಲ್ಲಾ ಇವರು ಅದೇ ದಿವಸ ಕಲಬುರಗಿಯ ಬಸವೇಶ್ವರ ಆಸ್ಪತ್ರೆಯಲ್ಲಿ ತೀರಿಕೊಂಡಿರುತ್ತಾರೆ. ಆರೋಪಿ ವಾಹನವನ್ನು ಸಾವಕಾಶವಾಗಿ ಚಲಾಯಿಸುತ್ತಿದ್ದರು. ಘಟನೆಯ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

(**ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.**)

**ಪಾಟೀ ಸವಾಲುಃ ಸರಕಾರಿ ಸಹಾಯಕ ಅಭಿಯೋಜಕರವರಿಂದ**

ಆ ದಿವಸ ರಾತ್ರಿ 07.30 ಗಂಟೆಗೆ ರಂಜೋಳ ಕಡೆಯಿಂದ ಸೇಡಂ ಕಡೆಗೆ ನಾವು ಒಟ್ಟಾಗಿ ಬರುತ್ತಿದ್ದೇವು ಎಂದರೆ ಸರಿಯಲ್ಲ. ಆಗ ಆರೋಪಿ ತಾನು ನಡೆಸುತ್ತಿದ್ದ ಮೋಟಾರ ಸೈಕಲ ನಂ. KA-32 EK 307 ನ್ನೆದ್ದನ್ನು ಅತೀ ವೇಗ ಹಾಗೂ ನಿಷ್ಕಾಳಜೀತನದಿಂದ ಚಲಾಯಿಸಿ ಸೇಡಂ ಕೊಡಂಗಲ್

ರೋಡಿನ ರಂಜೋಳ ಕ್ರಾಸ ಹತ್ತಿರ ಇರುವ ಮಕ್ಬುದ ಮುನಿಮ ಇವರ ಹೊಲದ ಹತ್ತಿರ ನಾಲೆಯಲ್ಲಿ ಅಪಘಾತಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಅಪಘಾತವು ಆರೋಪಿಯ ದುಡುಕುತನದ ಚಾಲನೆಯಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಕುರಿತು ಈಗ ಓದಿ ಹೇಳಿದಂತೆ ರಾತ್ರಿ 07.30 ಗಂಟೆಯ ಸುಮಾರಿಗೆ .......................................ಮೃತಪಟ್ಟಿರುತ್ತಾನೆ ಅಂತಾ ವಿಷಯ ತಿಳಿಯಿತು ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ನಿಪಿ-10 ಎಂದು ಗುರುತಿಸಲಾಯಿತು. ಆರೋಪಿ ನನ್ನ ಗೆಳೆಯನಾಗಿರುವುದರಿಂದ ಅವನಿಗೆ ಶಿಕ್ಷೆಯಾಗಬಾರದೆಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಆರ್. ಎಮ್. ಆರೋಪಿ ಪರ ವಕೀಲರಿಂದ**

ಏನು ಇರುವುದಿಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ.ಸರಿ ಇದೆ.

ಸಹಿ/-

ಪ್ರ. ದ. ನ್ಯಾ ದಂ. ಸೇಡಂ.

**SYH*